# QCA

(ಅಭ್ಯರ್ಥಿಯೇ ಭರ್ತಿ ಮಾಡಬೇಕು / To be filled by the Candidate)

ನೋಂದಣಿ ಸಂಖ್ಯೆ/Roll No : | | | | | |

ವಿಷಯ/Subject : ..............................................................................

ವಿಷಯ ಸಂಕೇತ/ Subject Code : | | |

ದಿನಾಂಕ / Date : ..............................................................................

ಮಾಧ್ಯಮ/ Medium : ................................................

ಪುಸ್ತಿಕೆಯ ಕ್ರಮಸಂಖ್ಯೆ
Booklet Serial No.

021183

(ಮೇಲಿನ ಕ್ರಮಸಂಖ್ಯೆಯನ್ನು ಪುಸ್ತಿಕೆಯ ಯಾವ ಭಾಗದಲ್ಲೂ ಬರೆಯಬಾರದು)
(Above S.No. should not be written any where else in the Booklet)

*ಸಂವೀಕ್ಷಕರ ಸಹಿ ಮತ್ತು ದಿನಾಂಕ*
***Invigilator's signature with Date***

## ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ಭಾಗದಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರಿಜಿಸ್ಟರ್ ನಂಬರನ್ನು ಬರೆಯಿರಿ.
2. ಪ್ರಶ್ನೆಸಹಿತ ಉತ್ತರ ಪುಸ್ತಿಕೆಯ ಯಾವುದೇ ಇತರ ಪುಟದಲ್ಲಿ ನಿಮ್ಮ ಹೆಸರು ಅಥವಾ ರಿಜಿಸ್ಟರ್ ನಂಬರನ್ನು ಬರೆಯಬೇಡಿ.
3. ಕಪ್ಪು ಅಥವಾ ನೀಲಿ ಪೆನ್ನನ್ನು ಉಪಯೋಗಿಸಿ ನಿಮ್ಮ ಉತ್ತರವನ್ನು ಬರೆಯಿರಿ.
4. **ಎಲ್ಲಾ ಪ್ರಶ್ನೆಗಳಿಗೆ ಪ್ರಶ್ನೆಸಹಿತ ಉತ್ತರ ಪುಸ್ತಿಕೆಯಲ್ಲಿ ಒದಗಿಸಿದ ಸ್ಥಳದಲ್ಲೇ ಉತ್ತರ ಬರೆಯಿರಿ. ಉತ್ತರಕ್ಕಾಗಿ ಹೆಚ್ಚುವರಿ ಹಾಳೆಯನ್ನು ಒದಗಿಸಲಾಗುವುದಿಲ್ಲ.**
5. ಪರೀಕ್ಷಾ ಕೊಠಡಿಯನ್ನು ಬಿಡುವ ಮೊದಲು ನಿಮ್ಮ ಪ್ರಶ್ನೆಸಹಿತ ಉತ್ತರ ಪುಸ್ತಿಕೆಯನ್ನು ಸ್ವತಃ ನೀವೇ ಸಂವೀಕ್ಷಕರಿಗೆ ಒಪ್ಪಿಸತಕ್ಕದ್ದು.
6. ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಅಂತಹ ಉತ್ತರ ಪತ್ರಿಕೆಯನ್ನು ರದ್ದುಗೊಳಿಸಲಾಗುವುದು.

## Instructions for Candidates

1. Write your Reg. No. in the space provided above.
2. Do not write your Name or Reg. No. on any other page of the Question Cum AnswerBooklet.
3. Write your answer using Blue or Black pen.
4. **Write answers for all questions in the space provided. No additional sheet will be provided.**
5. Handover your Question Paper Cum Answer Booklet personally to the invigilator, before you leave the examination hall.
6. Failure to adhere to any of the above mentioned instructions will render the paper liable for rejection.

ಈ ಪುಟದ ಮೇಲೆ ಏನನ್ನೂ ಬರೆಯಕೂಡದು

**DO NOT WRITE ANYTHING ON THIS PAGE**

| | ಪ್ರಶ್ನೆ ಸಂಖ್ಯೆ<br>Question. No. | ಆರಂಭದ ಪುಟಸಂಖ್ಯೆ<br>Starting Page No. | ನಿಗದಿಪಡಿಸಿದ ಅಂಕ<br>Marks allotted |
|---|---|---|---|
| ಭಾಗ – ಅ<br>**SECTION-A** | 1 | 5 | 25 |
| | 2 | 10 | 25 |
| | 3 | 17 | 25 |
| | 4 | 20 | 25 |
| ಭಾಗ – ಬ<br>**SECTION-B** | 5 | 22 | 10 |
| | 6 | 24 | 10 |
| | 7 | 28 | 5 |
| | 8 | 30 | 5 |
| | 9 | 30 | 5 |
| | 10 | 33 | 5 |
| | 11 | 34 | 10 |
| ಒಟ್ಟು ಮೊತ್ತ / Grand Total | | | 150 |

(2)

# QCA : 27

## ಕಡ್ಡಾಯ ಕನ್ನಡ

## COMPULSORY KANNADA

## 2014

ಸಮಯ : 2 ಗಂಟೆಗಳು
Time : 2 hours

ಗರಿಷ್ಠ ಅಂಕಗಳು : 150
Maximum marks : 150

### ಸೂಚನೆಗಳು

### INSTRUCTIONS

1. ಅಭ್ಯರ್ಥಿಗಳು **ಎಲ್ಲಾ ಭಾಗಗಳನ್ನು ಮತ್ತು ಪ್ರಶ್ನೆಗಳನ್ನು ಉತ್ತರಿಸಬೇಕು.**
2. ಪ್ರತಿ ಪ್ರಶ್ನೆಗೆ ನಮೂದಿಸಲಾದ ಅಂಕಗಳನ್ನು ಪ್ರಶ್ನೆಯ ಕೊನೆಯಲ್ಲಿ ನೀಡಲಾಗಿದೆ.
3. **ನಿರ್ದಿಷ್ಟವಾಗಿ ಸೂಚಿಸದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.**
4. ಭಾಗ ಎ ಪ್ರಶ್ನೆ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ ಪ್ರೆಸಿ ಗದ್ಯಭಾಗವು ಸೂಚನೆಗಿಂತ ಬಹಳ ಹೆಚ್ಚು ಅಥವಾ ಕಡಮೆಯಾದಲ್ಲಿ ಅಂಕಗಳನ್ನು ಕಳೆಯಲಾಗುವುದು.
5. ಭಾಗ ಎ ಪ್ರಶ್ನೆ ಸಂಖ್ಯೆ 3ನ್ನು ನೀಡಲಾದ ಪ್ರೆಸಿ ಹಾಳೆಯಲ್ಲಿಯೇ ಉತ್ತರಿಸತಕ್ಕದ್ದು.
6. ಪತ್ರವನ್ನು ಬರೆಯುವ ಪ್ರಶ್ನೆಗಳನ್ನು ಉತ್ತರಿಸುವಾಗ ನಿಮ್ಮ ಸಹಿಯನ್ನು ಹಾಕುವುದನ್ನಾಗಲೀ ಅಥವಾ ನಿಮ್ಮ ಹೆಸರು/ವ್ಯಕ್ತಿತ್ವವನ್ನು ನಮೂದಿಸುವುದನ್ನಾಗಲೀ ಮಾಡಕೂಡದು.

ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಮುಖಪುಟದಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

Candidate should read the Instructions given in the Facing Sheet, before you answering the questions.

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

## ಭಾಗ–ಅ

1. **ಈ ಕೆಳಗಿನ ಯಾವುದಾದರೂ ಒಂದರ ಬಗ್ಗೆ ಸುಮಾರು 200 ಶಬ್ದಗಳಲ್ಲಿ ಒಂದು ಪ್ರಬಂಧ ಬರೆಯಿರಿ.** **25 ಅಂಕಗಳು**

(ಅ) ಧಾರ್ಮಿಕ ಭಯೋತ್ಪಾದನೆ

(ಆ) ಜಾಗತಿಕ ತಾಪಮಾನದ ಪರಿಣಾಮಗಳು

(ಇ) ಜಾತ್ಯಾತೀತತೆಯ ಸವಾಲುಗಳು

(ಈ) "ಕಪ್ಪುಹಣ" ಒಂದು ಜಾಗತಿಕ ಸಮಸ್ಯೆ

ಉತ್ತರ :

(4)

2. **ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ.**

ಮೌಲ್ಯಮಾಪಕ ಉಪಯೋಗಕ್ಕೆ ಮಾತ್ರ
To be used by the Evaluator only

ಭಾರತೀಯ ಜನತೆಯಲ್ಲಿ, ಮಾನವ ಶಾಸ್ತ್ರೀಯ ಲಕ್ಷಣಗಳು ಅಥವಾ ಜನವರ್ಗಗಳು ಒದಗಿಸುವ ಮಾಹಿತಿಯ ಆಧಾರದಿಂದ, ಅತ್ಯಂತ ಮೂಲ ನಿವಾಸಿಗಳಾಗಿದ್ದವರು ಯಾರು ಎಂಬುದನ್ನು ಊಹಿಸಬಹುದಾಗಿದೆ. ಈ ವಿಷಯದಲ್ಲಿ ಅತ್ಯಂತ ಅಧಿಕೃತವಾಗಿ ಹೇಳಿರುವುದು ಮತ್ತು ವ್ಯಾಪಕವಾಗಿ ಸ್ವೀಕೃತವಾಗಿರುವುದು ಬಿ.ಎಸ್.ಗುಹಾ ಅವರು ಮಾಡಿರುವ ವರ್ಗೀಕರಣ. ಅವರು ಭಾರತ ಜನಕೋಟಿಯಲ್ಲಿ ಮುಖ್ಯವಾಗಿ ಆರು ಜನಾಂಗಿಕ ವರ್ಗಗಳನ್ನು ಗುರುತಿಸಿದರು. ಅವು ನೆಗ್ರಿಟೋ, ಪ್ರೋಟೋ – ಆಸ್ಟ್ರಲಾಯ್ಡ್, ಮಂಗೋಲಾಯ್ಡ್, ಮೆಡಿಟರೇನಿಯನ್, ಪಾಶ್ಚಾತ್ಯ ಬ್ರಾಕೀಸೇಫಲ್ಸ್ ಮತ್ತು ನಾರ್ಡಿಕ್, ಇವರಲ್ಲಿ ಮೊದಲ ಮೂರು ವರ್ಗದವರು ಈ ಉಪಖಂಡದ ಅತಿ ಪ್ರಾಚೀನ ನಿವಾಸಿಗಳು. ಅವರು ಸಣ್ಣ ಸಣ್ಣ ಪ್ರತ್ಯೇಕ ತಂಡಗಳಾಗಿದ್ದರು. ದಕ್ಷಿಣದಲ್ಲಿ ಕಾಡರ್, ಇರುಳಾ, ಪಣಿಯನ್ ಇವರು, ಅಂಡಮಾನ್ ದ್ವೀಪಸ್ತೋಮದಲ್ಲಿ ಓಂಗೇ ಮತ್ತು ಅಂಡಮಾನೀಸ್ ಇವರು. ಸ್ಪಷ್ಟವಾದ ನೆಗ್ರಿಟೋ ಲಕ್ಷಣಗಳನ್ನು ಹೊಂದಿರುವ ಜನವರ್ಗಗಳು. ಈ ವರ್ಗದ ಕೆಲವು ಲಕ್ಷಣಗಳು ರಾಜಮಹಲ್ ಪರ್ವತ ಪ್ರದೇಶದ ಅಂಗಾಮಿ ನಾಗಾ ಹಾಗೂ ಬಾಗಡಿಗಳಲ್ಲೂ ಗೋಚರಿಸುತ್ತದೆ. ಪಶ್ಚಿಮ ಕರಾವಳಿಯಲ್ಲಿಯೂ ನೆಗ್ರಿಟೋ ಲಕ್ಷಣಗಳನ್ನು ಸ್ಪಷ್ಟವಾಗಿ ಹೊಂದಿರುವ ಕೆಲವು ವರ್ಗಗಳು ಕಾಣಿಸುತ್ತವೆ.

ಮೂಲ ಆಸ್ಟ್ರಲಾಯ್ಡ್ ವರ್ಗವು ಸಂಖ್ಯಾ ದೃಷ್ಟಿಯಿಂದ ಹೆಚ್ಚು ಮಹತ್ವದ್ದಾಗಿದೆ. ಮಧ್ಯ ಭಾರತದ ಬಹುತೇಕ ವರ್ಗಗಳು ಅದಕ್ಕೆ ಸೇರುತ್ತವೆ. ಇವರನ್ನು ಇಂಡೋ–ಆರ್ಯನ್ನರು, ಅನಾ, ದಾಸ, ದಸ್ಯು, ನಿಷಾದ ಮೊದಲಾದ ಹೀನಾಯವಾದ ಪದಗಳಿಂದ ಬಣ್ಣಿಸಿದ್ದಾರೆ. ಮಂಗೋಲಾಯ್ಡ್ ವರ್ಗವನ್ನು ಎರಡು ಶಾಖೆಗಳಾಗಿ ವಿಭಜಿಸಲಾಗಿದೆ. ಅವು ಪೇಲಿಯೊ–ಮಂಗೋಲಾಯ್ಡ್ ಮತ್ತು ಟಿಬೆಟೊ–ಮಂಗೋಲಾಯ್ಡ್ ಹಿಮಾಲಯ ಪ್ರದೇಶ ಹಾಗೂ ಈಶಾನ್ಯ ಪ್ರದೇಶದ ಬುಡಕಟ್ಟುಗಳು ಮಂಗೋಲಾಯ್ಡ್ ಮೂಲದವು.

ಭಾರತಕ್ಕೆ ಆನಂತರ ಬಂದವರು ಮೆಡಿಟರೇನಿಯನ್ನರು. ನಮ್ಮ ದ್ರಾವಿಡ ಭಾಷೆ ಮತ್ತು ಸಂಸ್ಕೃತಿಗಳಿಗೆ ಮೆಡಿಟರೇನಿಯನ್ನರೊಂದಿಗೆ ಸಂಬಂಧವಿದೆ. ಭಾರತಕ್ಕೆ ಬಂದ ಅತ್ಯಂತ ಮುಖ್ಯ ಕುಲವರ್ಗಗಳಲ್ಲಿ ಕೊನೆಯವರು ನಾರ್ಡಿಕರು. ಅವರು ಭಾರತದ ಸಂಸ್ಕೃತಿ ಹಾಗೂ ಸಮಾಜದ ಮೇಲೆ ಅಗಾಧವಾದ ಪ್ರಭಾವ ಬೀರಿದರು. ಆದರೆ ಅವರು ಬರುವುದಕ್ಕೂ ಮೊದಲು ಭಾರತದಲ್ಲಿ ಒಂದು ವಿಶಿಷ್ಟವಾದ ನಾಗರಿಕತೆಯು ನಿಧಾನವಾಗಿ ರೂಪುಗೊಂಡಿತ್ತು. ಅದು ಸಿಂಧೂ ಕಣಿವೆಯ ನಾಗರಿಕತೆ ಎಂದು ಹೆಸರಾಗಿದೆ. ಸಿಂಧೂ ಕಣಿವೆಯ ನಾಗರಿಕತೆಗೆ ಮುಖ್ಯವಾಗಿ ಮೊಹಂಜೊದಾರೋ ಮತ್ತು ಹರಪ್ಪ ನಗರಗಳು ಸಂಬಂಧಪಟ್ಟಿವೆ. ಈ ನಾಗರಿಕತೆಯನ್ನು ಮೊದಲು ಪರಿಶೋಧಿಸಿದ್ದು ಈ ನಗರಗಳಲ್ಲಿ. ಈ ನಾಗರಿಕತೆಯು ಸುಮಾರು ಕ್ರಿ.ಪೂ.2500 ರಲ್ಲಿ ಕಾಣಿಸಿಕೊಂಡಿತು. ಈ ನಾಗರಿಕತೆಗೆ ಸಂಬಂಧಿಸಿದಂತೆ ದೊರಕಿರುವ ಅಸ್ಥಿ ಅವಶೇಷಗಳಲ್ಲಿ ಪ್ರೋಟೋಆಸ್ಟ್ರಲಾಯ್ಡ್, ಮೆಡಿಟರೇನಿಯನ್, ಆಲ್ಪೈನ್ ಮತ್ತು ಮಂಗೋಲಾಯ್ಡ್ ಕುಲಗಳ ಅಂಶಗಳು ಕಂಡುಬಂದಿದ್ದು ಅವರೆಲ್ಲರೂ ಅದರ ಬೆಳವಣಿಗೆಗೆ ತಂತಮ್ಮ ಕೊಡುಗೆ ಸಲ್ಲಿಸಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅದೊಂದು ಪಟ್ಟಣ ನಾಗರಿಕತೆ. ಅದರ ನಗರ ಯೋಜನೆಯಲ್ಲಿ ಅಪ್ರತಿಮವಾದ ಸಾಮರ್ಥ್ಯ ಮತ್ತು ಕೌಶಲಗಳು ವ್ಯಕ್ತಗೊಂಡಿವೆ. ನಗರಗಳನ್ನು ಅಚ್ಚು ಕಟ್ಟಾಗಿ ಯೋಜಿಸಲಾಗಿತ್ತು. ಮನೆಗಳು ವಿಶಾಲವಾಗಿದ್ದವು. ನಿರ್ಮಾಣದಲ್ಲಿ ಅತ್ಯುತ್ತಮ ಗುಣಮಟ್ಟದ ಸಾಮಗ್ರಿಗಳನ್ನು

ಬಳಸಲಾಗಿತ್ತು. ಅವರು ಗೂಳಿ, ಎಮ್ಮೆ, ಒಂಟೆ, ಆನೆ ಇತ್ಯಾದಿ ಪ್ರಾಣಿಗಳನ್ನು ಸಾಕಿಕೊಂಡಿದ್ದರು. ಕರಾವಳಿಯ ಒಳನಾಡಿನಲ್ಲಿ ಅಪಾರ ಪ್ರಮಾಣದ ಧಾನ್ಯಗಳನ್ನು ಬೆಳೆದು ಅವುಗಳನ್ನು ನಗರದಲ್ಲಿ ಕಟ್ಟಿದ್ದ ವಿಶಾಲ ಉಗ್ರಾಣಗಳಲ್ಲಿ ಶೇಖರಿಸಿಡುತ್ತಿದ್ದರು. ಭಾರತ ಉಪಖಂಡದ ಬೇರೆ ಬೇರೆ ಭಾಗಗಳಲ್ಲಿ ಹಾಗೂ ಪರ್ಷಿಯನ್ ಕೊಲ್ಲಿ ದೇಶಗಳಲ್ಲಿ ಲಾಭದಾಯಕವಾದ ವ್ಯಾಪಾರ, ವಾಣಿಜ್ಯ ಚಟುವಟಿಕೆಗಳನ್ನು ಹೊಂದಿದ್ದರು.

ಆಮೇಲೆ ಇಂಡೋ–ಆರ್ಯನರು ಬಂದರು. ಆಗಲೇ ಇಲ್ಲಿ ಇದ್ದ ಮೂಲ ನಿವಾಸಿಗಳೊಂದಿಗೆ ಘರ್ಷಣೆ ನಡೆಯಿತು. ಅವರು ತಮ್ಮದೇ ಆದ ನಾಗರಿಕತೆಯೊಂದನ್ನು ತರಲಿಲ್ಲ. ಮೂಲತಃ ಅವರು ದನಗಾಹಿ ಜನ. ಕಾವ್ಯದ ಬಗೆಗೆ ಆಸಕ್ತಿ, ತಾತ್ವಿಕ ಚಿಂತನೆ, ವಿಸ್ತಾರವಾದ ಧಾರ್ಮಿಕಾಚರಣೆಗಳನ್ನು ಅವರು ಹೊಂದಿದ್ದರು. ಅವರು ಜನಾಂಗವಾದಿಗಳು. ತಾವು ಬಹಳ ಮೇಲ್ಮಟ್ಟದ ಜನರೆಂದು ಭಾವಿಸಿ ಈ ನಾಡಿನ ಮೂಲ ನಿವಾಸಿಗಳನ್ನು ಕೀಳಾಗಿ ನೋಡಿದರು, ಎಂಬ ಅರ್ಥದಲ್ಲಿ ಅವರು ಇಲ್ಲಿನ ಮೂಲನಿವಾಸಿಗಳನ್ನು ಅನೇಕ ಹೀನಾಯಕರವಾದ ಹೆಸರುಗಳಿಂದ ಕರೆದರು. ತಮ್ಮ ಪಂಗಡದೊಳಗೇ ಅವರು ವಿವಾಹ ಸಂಬಂಧಗಳನ್ನು ನಡೆಸಬೇಕಾಯಿತು. ಅಂದರೆ ಸ್ವಗೋತ್ರ ವಿವಾಹ ಪದ್ಧತಿಯನ್ನು ಚಾಲ್ತಿಯಲ್ಲಿಟ್ಟರು. ಧಾರ್ಮಿಕಾಚರಣೆಗಳ ಪರಿಶುದ್ಧಿ ಮತ್ತು ಮೈಲಿಗೆ ಎಂಬರ್ಥದ ಮೂಲ ಭಾವನೆಯನ್ನು ಅವರು ಹೊಂದಿದ್ದರು. ಇದೇ ಅವರ ಸಾಮಾಜಿಕ ಸಂಪರ್ಕಗಳ ಮೇಲೆ, ಅಂತರ್ – ಭೋಜನ ಸಂಬಂಧಗಳ ಮೇಲೆ ಪ್ರಭಾವ ಬೀರಿದವು. ಇದರಿಂದ ವರ್ಣಗಳ ಉದಯವಾಯಿತು. ಜಾತಿಯೂ ಆಗ ಹುಟ್ಟಿತು.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **5 × 5 = 25**

a) ಭಾರತದ ಜನಕೋಟಿಯಲ್ಲಿ ಆರು ಜನಾಂಗಿಕ ವರ್ಗಗಳನ್ನು ಮಾಡಿದವರು ಯಾರು? ಅವು ಯಾವುವು?

ಉತ್ತರ ____________________

____________________

____________________

____________________

____________________

____________________

____________________

____________________

____________________

____________________

____________________

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(6)

b) ಮಂಗೋಲಾಯ್ಡ್ ಬುಡಕಟ್ಟನ್ನು ಎಷ್ಟು ಭಾಗವಾಗಿ ವಿಂಗಡಿಸಲಾಗಿದೆ. ಅದರ ಮೂಲ ಪ್ರದೇಶಗಳು ಯಾವುವು?

ಉತ್ತರ

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(7)

c) ಸಿಂಧೂ ಕಣಿವೆಯ ನಾಗರಿಕತೆಯ ನಗರ ನಿರ್ಮಾಣ ಹಾಗೂ ಅವರ ಸಾಮರ್ಥ್ಯ ಹೇಗಿತ್ತು?

ಉತ್ತರ

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(8)

d) "ನೆಗ್ರಿಟೊ" ನಿವಾಸಿಗಳು ಯಾರು? ಇವರ ಬಗ್ಗೆ ಬರೆಯಿರಿ.

ಉತ್ತರ

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(9)

e) ಇಂಡೋ-ಆರ್ಯನರಿಂದ ವರ್ಣಗಳ ಉದಯವಾಯಿತು. ಹೇಗೆ?

ಉತ್ತರ

ಮೌಲ್ಯಮಾ
ಉಪಯೋ
ಮಾತ್ರ

To be u
by th
Evalua
only

(10)

## ಪ್ರೆಸಿ ಲೇಖನ/Precis Writing

3. **ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ 75 ಶಬ್ದಗಳಿಗೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ.** **25 ಅಂಕಗಳು**

**ವಿ.ಸೂ.: ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.**

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

ಅನ್ನದ ವಿಷಯ ಬಹಳ ಸಣ್ಣ ವಿಷಯ ಎಂದು ಬಹಳ ಜನರ ತಿಳುವಳಿಕೆ "ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂದು ಹೇಳಿದ ದಾಸರು ಅನ್ನವಸ್ತ್ರಕ್ಕೆ ಕೊಡುವ ಮಹತ್ವವನ್ನು ಸೂಚಿಸಿದ್ದರೂ ಅದರ ಸ್ಥಾನವು ಮೇಲ್ತರಗತಿಯದಲ್ಲ ಎಂದು ಸಾರಿದ್ದಾರೆ. ದೇವರು ಹುಲ್ಲು ಮೇಯಿಸುವುದಿಲ್ಲ. ಪ್ರಾಣಿ ಹುಟ್ಟುವುದರ ಮೊದಲು ಅವನ ಅನ್ನ ಹುಟ್ಟಿರುತ್ತದೆ. ದೇಶವು ಧರ್ಮದ ಪ್ರಥಮ ಸಾಧನ ಎಂಬುದೇ ನಿಜವಾದರೆ ಅನ್ನವು ಅದರ ಪ್ರಥಮ ಸಮಸ್ಯೆ ಎಂಬುದರಲ್ಲಿ ಸಂದೇಹವೇ ಇಲ್ಲ. ಅನ್ನದ ಸಮಸ್ಯೆಯು ತ್ರಿವಿಕ್ರಮನ ಬೇತಾಳದಂತೆ ಮೊದಲಿದ್ದ ಸ್ಥಳದಲ್ಲಿಯೇ ತೂಗಾಡುತ್ತಲಿದೆ. ಬೇತಾಳದಂತೆಯೇ ಅದು ತನ್ನ ಸ್ಥಳಬಿಟ್ಟು ಕದಲಿ ಕೆಲಕಾಲ ಹಾದಿಯವರೆಗೆ ಬರುವುದು. ಆದರೆ ಕೊನೆಯವರೆಗೂ ಬರುವುದಿಲ್ಲ. ಸಮಸ್ಯೆ ಬಿಡಿಸುವುದಾಗುವುದಿಲ್ಲ. ಈ ಸಮಸ್ಯೆಯನ್ನು ಸಮಗ್ರವಾಗಿ ಬಿಡಿಸಿದ್ದೇ ಆದರೆ ಧರ್ಮವು ಇನ್ನೊಂದು ಘಟ್ಟ ಮೇಲಕ್ಕೆ ಏರಲೇಬೇಕು.

ಪ್ರಾಣಿಯು ಪ್ರಾಣ ಉಳಿಯಲೆಂದು ಹಸಿವೆಯ ಹೊಟ್ಟೆ ಉರಿಯನ್ನು ತಣಿಸಲು ಏನೇನನ್ನು ತಿನ್ನುವುದೋ ಅದೆಲ್ಲವೂ ಅನ್ನ. ನೆಲವೆಲ್ಲವೂ ಅನ್ನ, ಮಣ್ಣು ಹುಳು–ಹುಪ್ಪಡಿಯೂ, ಅನ್ನ, ಹುಳು–ಹುಪ್ಪಡಿ ಹಕ್ಕಿ ಪಕ್ಷಿಗಳ ಅನ್ನ, ಈ ಹಕ್ಕಿ ಪಕ್ಷಿ ಮನುಷ್ಯಾದಿ ಪ್ರಾಣಿಗಳ ಅನ್ನ, ವನಸ್ಪತಿಗಳು ಸೃಷ್ಟಿಯ ಮಣ್ಣು – ನೀರು – ಗಾಳಿ ಬೆಳಕನ್ನು ಉಂಡು ಬೆಳೆಯುತ್ತದೆ. ಈ ವನಸ್ಪತಿಯೆ ಕ್ರಿಮಿಕೀಟಕ ಮೊದಲುಗೊಂಡು ಮಾನವನವರೆಗೂ ಆಹಾರವಾಗಿದೆ. ಹಿಂಸ್ರ ಪಶುಗಳು ಒಂದನ್ನೊಂದು ತಿನ್ನುವುದಲ್ಲದೆ ಹಸಿವೆಯ ಉನ್ಮತ್ತತೆಯಲ್ಲಿ ಮಾನವನನ್ನೂ ತಿನ್ನುವುದುಂಟು. ಮಾನವನಿಗೆ ಆಹಾರವಾಗದ ಪ್ರಾಣಿಯೂ ಇಲ್ಲ, ಪದಾರ್ಥವೂ ಇಲ್ಲ. ಹಸಿದಾಗ ಕಲ್ಲನ್ನು ತಿಂದು ಕರಗಿಸಬಲ್ಲ. ಹಸಿವೆಯ ರಾಕ್ಷಸವು ಅವನಲ್ಲಿ ಕೂಗುವಾಗ ಮನುಷ್ಯನನ್ನೇ ತಿನ್ನಲು ಮನುಷ್ಯನು ಹೇಸಿಲ್ಲ. ವಿಶ್ವಾಮಿತ್ರ ನಾಯಿಯನ್ನು ತಿಂದು ಬದುಕಿ ಮತ್ತೆ ದೊಡ್ಡ ತಪಸ್ವಿಯಾದ. ಉಣ್ಣು ತಿನ್ನುವುದರೊಳಗಿನ ಮಡಿವಂತಿಕೆ ಹೇಸಿಕೆ ಮಾನವ ಸಂಸ್ಕೃತಿಯಂತೆಯೇ ಅವನ ಜಂಭದ ಇತಿಹಾಸ ಒಂದು ಭಾಗ ಮಾತ್ರ. ಅಂದಹಾಗೆ ಎಲ್ಲ ಸಂಸ್ಕೃತಿ ನಾಗರೀಕತೆಗಳ ವೈಭವದ ಕಾಲದಲ್ಲಿ ಅನ್ನದ ಸಮೃದ್ಧಿ ಇತ್ತು. ಅನ್ನಕ್ಕೆ ಬೆಲೆಯಿತ್ತು, ಪಾವಿತ್ರ್ಯವಿತ್ತು, ದೈವತ್ವವಿತ್ತು ಎಂದು ಕಂಡು ಬಂದಿದೆ.

ಸಾಯುವವರೆಗೆ ಹೇಗಾದರೂ ಮೈ ಉಳಿಸಿಕೊಳ್ಳುವಂತೆ ಏನಾದರೂ ತಿಂದು ಬಾಳುವುದು ಅನ್ನದ ಸಮಸ್ಯೆಗೆ ಉತ್ತರವೇ ಅಲ್ಲ. ಹುಲ್ಲು ತಿಂದೂ ಬಾಳಬಹುದು. ಆದರೆ ಅದಕ್ಕೆ ಮನುಷ್ಯರಾಗಿ ಬದುಕುವುದು ಅವಶ್ಯಕವಲ್ಲ. ಮಣ್ಣು ತಿನ್ನುವ ಪ್ರಾಣಿಗಳೂ ಇವೆ. ಅಮೃತ ಉಣ್ಣುವ ದೇವತೆಗಳ ಕಲ್ಪನೆಯೂ ಇದೆ. ಮನುಷ್ಯನ ಮೈಕೂಡ ಅನ್ನದ ಪರಿಣಾಮವೇ. ಅದೇಕೆ ಮೈಕೂಡ ಅನ್ನವಲ್ಲವೆ?

4. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. 25 ಅಂಕಗಳು

Success brings out the talents and abilities of a man. Success will not come behind us, but we have to go behind success. When God creates human beings he blesses them with abundance; with countless talents and abilities. It is our duty to make use of those talents and abilities and become successful in life. To become successful, we should have a great and firm desire. Without a strong desire no one can become successful. Than desire is a prominent tool or aspect which a successful person should possess. Success makes one's life fruitful. We all know about Tensing, He was the first man to climb the Mount Everest. In his young age he had a great desire to climb the Everest. But he was denied of all opportunities. But at last he got an opportunity to climb the Mount Everest. then, he succeeded in his life. Likewise, when we attempt any work and are not successful, we should not lose hopes or give up our desire, we should try again and again. I am sure that if we try constantly we will succeed, we should be reminded of the proverb "where there is a will, there is a way".

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

## ಭಾಗ–ಬ

**ಪತ್ರ ಲೇಖನ/Letter writing**

5. ಕೆಳಗಿನವುಗಳಲ್ಲಿ ಒಂದನ್ನು ಕುರಿತು 100 ಪದಗಳಲ್ಲಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. 10 ಅಂಕಗಳು

a) ತ್ಯಾಜ್ಯ ವಸ್ತುಗಳ ಮರುಬಳಕೆ

b) ಪ್ರಕೃತಿ ವಿಕೋಪ ನಿರ್ವಹಣೆಯಲ್ಲಿ ಸರ್ಕಾರದ ಪಾತ್ರ

c) ಭಯೋತ್ಪಾದನೆ

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(13)

6. ಕೆಳಗಿನವುಗಳಲ್ಲಿ ಎರಡರ ಅರ್ಥಸ್ವಾರಸ್ಯವನ್ನು ವಿವರಿಸಿ. 10 ಅಂಕಗಳು

a) ತುಂಬಿದಕೊಡ ತುಳುಕುವುದಿಲ್ಲ

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

b) ಅತಿ ಆಸೆ ಗತಿಕೇಡು

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

c) ಅರ್ಥವಿಲ್ಲದ ಓದು ವ್ಯರ್ಥ

d) ಕಾಲವೇ ಹಣ

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

17

7. ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥವನ್ನು ವಿವರಿಸಿ, ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ. 5 ಅಂಕಗಳು

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

a) ಅಂಗೈನೆಲ್ಲಿ

b) ಒಡಕುಬಾಯಿ

c) ಮೂಗು ತೂರಿಸು

d) ಗಂಟುಕಟ್ಟು

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

e) ಕಣ್ಣೀರಿನಲ್ಲಿ ಕೈತೊಳೆ

8. ಈ ಕೆಳಗಿನವುಗಳಲ್ಲಿ 5ಕ್ಕೆ ತತ್ಸಮ ರೂಪಗಳನ್ನು ಕೊಡಿ: 5 ಅಂಕಗಳು

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

a) ಅಜ್ಜ

ಉತ್ತರ:

b) ಇಳೆ

ಉತ್ತರ:

c) ರಿತು

ಉತ್ತರ:

d) ಕನ್ನೆ

ಉತ್ತರ:

e) ಕತ್ತುರಿ

ಉತ್ತರ:

f) ಕಬ್ಬ

ಉತ್ತರ:

g) ಸಂಪಿಗೆ

ಉತ್ತರ:

h) ಪಯಣ

ಉತ್ತರ:

i) ಹಣತೆ

ಉತ್ತರ:

j) ಬೊಮ್ಮ

ಉತ್ತರ:

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

9. ಕೆಳಗಿನವುಗಳಲ್ಲಿ 5ಕ್ಕೆ ತದ್ಭವ ರೂಪಗಳನ್ನು ನೀಡಿ: **5 ಅಂಕಗಳು**

a) ಅಕ್ಷರ

ಉತ್ತರ:

b) ಆಕಾಶ

ಉತ್ತರ:

c) ಆಕರ

ಉತ್ತರ:

d) ಚದುರ

ಉತ್ತರ:

e) ಜಟಾ

ಉತ್ತರ:

f) ತ್ಯಾಗ

ಉತ್ತರ:

g) ಪ್ರಸಾದ

ಉತ್ತರ:

h) ಬ್ರಹ್ಮ

ಉತ್ತರ:

i) ಭಕ್ತಿ

ಉತ್ತರ:

j) ಮತ್ಸರ

ಉತ್ತರ:

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

10. ಈ ಕೆಳಗಿನವುಗಳಲ್ಲಿ 5ಕ್ಕೆ ವಿರುದ್ಧಾರ್ಥಕ ಶಬ್ದ ತಿಳಿಸಿ: 5 ಅಂಕಗಳು

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

a) ಸತ್ಯ

ಉತ್ತರ: ______

b) ಜಯ

ಉತ್ತರ: ______

c) ದೂರ

ಉತ್ತರ: ______

d) ಕಪ್ಪು

ಉತ್ತರ: ______

e) ಒಳಗೆ

ಉತ್ತರ: ______

f) ಪಾಪ

ಉತ್ತರ: ______

g) ಆಸೆ

ಉತ್ತರ: ______

h) ಸುಖ

ಉತ್ತರ: ______

i) ಸ್ವರ್ಗ

ಉತ್ತರ: ______

j) ಸಿರಿತನ

ಉತ್ತರ: ______

(23)

11. ಈ ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ: $2 \times 5 = 10$

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

a) ಅದು ಅಪರುಪದ ಕ್ರುತಿಯಾಗಿದೆ.

ಉತ್ತರ: ______

______

b) ಎಲ್ಲರೂ ಅನಾನುಕೂಲ ಪರಿಸ್ಥಿತಿಯನ್ನು ಹೆದುರಿಸಬೇಕು.

ಉತ್ತರ: ______

______

c) ಆ ಕೊಟಡಿಯಲ್ಲಿ ಕಾರ್ಯಗಾರ ನಡೆಯುತ್ತಿದೆ.

ಉತ್ತರ: ______

______

d) ಬೆಳಗಿನ ಉಪಹಾರ ಸಿದ್ದವಾಗಿದೆ.

ಉತ್ತರ: ______

______

e) ವೈಗ್ನಾನಿಕ ಸಂಶೋದನೆಯಿಂದ ಜನಸಾಮಾನ್ಯರಲ್ಲಿ ತಿಳುವಳಿಕೆ ಮೂಡಿದೆ.

ಉತ್ತರ: ______

______